ಸರಿಯಾಗಿ ತಿಂಡಿ ತಿನಿಸು ಮಾಡೂದು ಒಂದು ಪವಾಡ ಎಂದು ಬಾಯ್ತುಂಬ ಹಾಡಿ ಹೊಗಳುತ್ತಿದ್ದರು. ಬಹಳಷ್ಟು ಸಲ ಲಕ್ಷ್ಮವ್ವ ಮುಜುಗರಗೊಂಡದ್ದೂ ಇದೆ. ಆಕೆ ಇದನ್ನೊಂದು ಹಿರಿಯರಿಗೆ ಮಾಡುವ ಸೇವೆಯೇ ಎಂದು ತಿಳಿದಿದ್ದಳು. ಆಕೆಯು ಟುಸ್ ಬುಸ್ ಎಂದು ಗ್ಯಾಸಿನ ಮೇಲೆ ಎಂದೂ ಕುದಿಸುತ್ತಿರಲಿಲ್ಲ. ಆಕೆಯ ತಿಂಡಿ ತಿನಿಸುಗಳು ಮಂದಗಿನ ಬೆಂಕಿಯಲ್ಲಿ ಬೇಯ್ದು ಕೈಯಿಂದಲೇ ತಯಾರಾಗಿ ಬರುತ್ತಿದ್ದವು. ತನ್ನ ತಾಯಿ ಕಲಿಸಿದ ಅಡುಗೆಗಳನ್ನು ಹಾಗೂ ಬೇರೆ ಬೇರೆ ಕಜ್ಜಾಯಗಳ ತಯಾರಿಕೆಯನ್ನು ಚಾಚೂತಪ್ಪದೇ ಮುಂದುವರಿಸಿಕೊಂಡು ಬಂದಿದ್ದಳು. ಹುರೆಕ್ಕಿ ಹೋಳಿಗೆ ಲಕ್ಷ್ಮವ್ವ ಬರಿ ಹೆಸರಾಗಿರಲಿಲ್ಲ, ಅಜ್ಜಿಗಳ ನಾಲಿಗೆಯ ಮೇಲಿನ ರುಚಿಯೂ ಆಗಿದ್ದಳು.

★★★

ವೇಳೆ ಉಳಿದಾಗ ಲಕ್ಷ್ಮವ್ವ ಏನು ಮಾಡುತ್ತಿದ್ದಳು? ಹೌದು! ಆಕೆಯು ಹುಟ್ಟುವ, ಹುಟ್ಟಿ ಬೆಳೆಯುವ ಮಕ್ಕಳಿಗಾಗಿ ಕುಂಚಗಿ, ಕುಲಾಯಿ, ದುಬಟಿ ತಯಾರಿಸುವುದರಲ್ಲಿ ನಿಸ್ಸೀಮಳಾಗಿದ್ದಳು. ಆಕೆ ಉದಯಿಸುವ ಸೂರ್ಯ, ಮುಳುಗುವ ಸೂರ್ಯನ ಸುತ್ತಲಿನ ಎಲ್ಲ ಬಣ್ಣಗಳನ್ನು ಸಣ್ಣ ಸಣ್ಣ ತುಕಡಿಯ ಅರಿವೆಗಳಲ್ಲಿ ಎತ್ತುತ್ತಿದ್ದಳು. ಹರಿದು ಕತ್ತರಿಸಿದ ಬಣ್ಣಬಣ್ಣದ ತುಕಡಿಗಳು ಕಲಾಕಾರನು ತಯಾರಿಸಿದ ವಿಶಿಷ್ಟ ಬಣ್ಣದ ದೈವಿಕ ರಸಾಯನಗಳಂತೆಯೇ ಕಾಣುತ್ತಿದ್ದವು. ಮಣ್ಣಿನ ಬಣ್ಣಗಳು ಆಕೆಗೆ ಬಲು ಇಷ್ಟ! ಮಸಾರಿ ಮಣ್ಣಿನ ಬಣ್ಣದ ಅರಿವೆಯ ಒಂದು ದೊಡ್ಡ ತುಕಡಿ ತಲೆಯ ಚಾಟಿನ ಹೊದಿಕೆಯಾದರೆ, ಇಳಿಬಿದ್ದ ಬಟ್ಟೆಯ ಅಂಚಿಗೆ ಎರೆಮಣ್ಣಿನ ಬಣ್ಣದ ತುಕಡಿಗಳು ತೆಳುವಾಗಿ ಚಿತ್ರದಂತೆ ಮೂಡಿಬರುತ್ತಿದ್ದವು. ಮಸಾರಿ ಹಾಗು ಎರೆಮಣ್ಣಿನ ಬಣ್ಣಗಳು ಆಕೆಯ ಕಲ್ಪನೆಯ ಲೋಕಸೃಷ್ಟಿಯೇ ಆಗಿತ್ತು. ಉಪಯೋಗವಿಲ್ಲದ ಅರಿವೆಯ ತುಕಡಿಗಳಲ್ಲಿ ಆಕೆಯು ಸೃಷ್ಟಿಸುತ್ತಿದ್ದುದು ಬ್ರಹ್ಮನ ಕಲ್ಪನೆಗೂ ಸಿಗುತ್ತಿರಲಿಲ್ಲ. ನಮ್ಮೂರಿನ ಸಿದ್ದೇಶ್ವರ ಕೊಳ್ಳದ ವನ, ಗುಡ್ಡದ ಮೇಲಿನ ಚಿತ್ತ ಚಿತ್ತಾರದ ಎಲ್ಲಮ್ಮನ ಸಣ್ಣ ಗುಡಿ, ನವಿಲುಗಳು, ಸಣ್ಣ ಸಣ್ಣ ಕರುಗಳು, ಗೊತ್ತೂ ಗೊತ್ತಾಗದ ಅತಿ ಸೂಕ್ಷ್ಮ ಚಿತ್ತಾರಗಳು ಮೂಡಿಬರುತ್ತಿದ್ದವು. ಬಾಲಕೃಷ್ಣನ ಲೀಲೆಗಳಿಗಂತೂ ಕೊರತೆ ಇರಲಿಲ್ಲ. ಒಮ್ಮೊಮ್ಮೆ ಯಶೋದೆಯೂ ಕಾಣಿಸಿಕೊಳ್ಳುತ್ತಿದ್ದಳು. ಆಕೆಯ ಕಲ್ಪನೆಯಲ್ಲಿ ಜೀವ ಪಡೆಯುತ್ತಿದ್ದ ಸುಳುವುಗಳು ವಾಸ್ತವದ ಮಣ್ಣನ್ನು ಕೈಯಲ್ಲಿ ಹಿಡಿದಂತೆ, ಜೀವ ಜಗತ್ತನ್ನೂ ದಾಟಿದ ದೈವಿಕ ಅಂಚುಗಳನ್ನು ಮುಟ್ಟಿದಂತೆ, ಅಲ್ಲಿ

**‘ಈ ಡಬ್ಬಿ ಸವಕಳಿಯಾಗಿದೆ ಎಂದು ಎಲ್ಲಿಯೂ ಒಗೆಯಬೇಡ. ಅದರ ಒಳಗೆ ಬಸರಿಗಿಡದ ಒಣಗಿದ ಎಲೆಗಳಿವೆ. ಈ ಒಣಗಿದ ಎಲೆಗಳನ್ನು ಒಮ್ಮೆಯಾದರೂ ದಿಟ್ಟಿಸಿ ನೋಡಿರುವೆಯಾ? ಅವುಗಳಲ್ಲಿ ಸಜೀವ ನರಗಳಿವೆ, ಉಸಿರಾಟವಿದೆ, ಅವು ನಮ್ಮಂತೆಯೇ ಇವೆ. ಬದುಕು ಯಾವಾಗಲು ಹಸಿರಾಗಿರುವುದಿಲ್ಲ. ಅದು ಈ ಒಣಗಿದ ಎಲೆಗಳಂತೆಯೇ ಇರುತ್ತದೆ. ಈ ಎಲೆಗಳನ್ನು ಯಾವಾಗಲು ರಕ್ಷಿಸು...’**